**<u>ದಿನಾಂಕಃ 28.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು</u>.**

<u>ಮುಂದುವರಿದ ಪಾಟೀಸವಾಲುಃ</u> **<u>ವಾದಿ ಪರಃ ಶ್ರೀ ಬಿ ಕೆ ವಿ ವಕೀಲರಿಂದಃ</u>**

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಏನೇ ವ್ಯವಹಾರ ಮಾಡಬೇಕಾದಲ್ಲಿ ಇಂಗ್ಲಿಷ್ನಲ್ಲಿ ಕನ್ನಡದಲ್ಲಿ ಇದ್ದಲ್ಲಿ ತಿಳಿದುಕೊಂಡು ವ್ಯವಹಾರ ಮಾಡುತ್ತೀರಾ ಅಂದಂರೆ ಸಾಕ್ಷಿ ಇಂಗ್ಲಿಷ್ ಬರುವುದಿಲ್ಲ, ಕನ್ನಡ ಸ್ವಲ್ಪ ಸ್ವಲ್ಪ ಬರುತ್ತದೆ ಎನ್ನುತ್ತಾರೆ. ನಿಮ್ಮ ಮನೆಯಲ್ಲಿ ಹಣಕಾಸಿನ ವ್ಯವಹಾರವನ್ನು ನೀವುಮಾಡುತ್ತೀರೋ ಅಥವಾ ನಿಮ್ಮ ಗಂಡ ಮಾಡುತ್ತಾರೋ ಎಂದರೆ

ಸಾಕ್ಷಿ ನನ್ನ ಗಂಡ ಮಾಡುತ್ತಾರೆ ಎನ್ನುತ್ತಾರೆ. ನೀವು ಓ ಎಸ್ ನಂಃ 759/13 ದಾವೆಯನ್ನು ಸಲ್ಲಿಸಿದ್ದು ಅದರಲ್ಲಿ ಏನು ಪರಿಹಾರ ಕೇಳಿರುತ್ತೀರಿ ಎಂದರೆ ಸಾಕ್ಷಿ ಅದನ್ನು ವಾಪಸ್ ಪಡೆಯಲಾಗಿದೆ ಎನ್ನುತ್ತಾರೆ. ಪರಿಹಾರ ಏನು ಕೇಳಿದ್ದೀರಿ ಎಂದರೆ ಸಾಕ್ಷಿ ರಿಜಿಸ್ಟರ್ ಮಾಡಿಕೊಡಿ ಎಂದು ಕೇಳಿದ್ದೆನು. ಆ ದಾವೆಯನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆವು. ಯಾವ ದಿನಾಂಕದಲ್ಲಿ ಸಲ್ಲಿಸಿದ್ದೆವು ಎಂದು ಹೇಳಲು ನೆನಪಿಲ್ಲ. ನಾವು ನೀಡಿದ ನೋಟೀಸಿನಲ್ಲಿ ನೀವು ಬಂದು ರಿಜಿಸ್ಟರ್ ಮಾಡಿಕೊಡಿ ಎಂದು ತಿಳಿಸಿದ್ದೆವು. ಆ ನೋಟೀಸಿನ ದಿನಾಂಕ ಹೇಳಲು ನೆನಪಿಲ್ಲ. ಈ ಹಿಂದೆ ದಾವೆ ಸಲ್ಲಿಸಿದ್ದಾಗ ಅಗ್ರಿಮೆಂಟ್ ರಿಜಿಸ್ಟರ್ ಆಗಿತ್ತು, ಆದ್ದರಿಂದ ಸಲ್ಲಿಸಿದ್ದೇವೆ. ದಿಃ10-12-2002 ರ ಕರಾರು ಪತ್ರವಾಗಿರುತ್ತದೆ ಅದೇ ದಿನಾಂಕದಂದು ಸದರಿ ಕರಾರು ನೋಂದಣಿಯಾಗಿರುತ್ತದೆ. ಆ ಪತ್ರದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತೇವೆ. ದಾವಾ ಆಸ್ತಿಯು 13 ನೇ ವಾರ್ಡಿನಲ್ಲಿ ಬರುತ್ತದೆ, ಅದರ ಅಳತೆ 61 X 27 x 6 ಆಗಿರುತ್ತದೆ. ಪೂರ್ವ ಪಶ್ಚಿಮ 61 ಅಡಿ, ಉತ್ತರ ದಕ್ಷಿಣ 27/6 ಆಗಿರುತ್ತದೆ. ಈ ಆಸ್ತಿಯನ್ನು ಮಧುರವರು ಕ್ರಯಕ್ಕೆ ಕಾಳೇಗೌಡರಿಂದ ಖರೀದಿಸಿರುತ್ತಾರೆ ಮಧುರವರ ಕುಟುಂಬದಲ್ಲಿ ಇಬ್ಬರು ಗಂಡುಮಕ್ಕಳು ಇದ್ದ ಬಗ್ಗೆ ಗೊತ್ತು. ನಾವು ಬೇರೇನನ್ನೂ ಕೇಳಿಲ್ಲ. ಮಧು 4 ಜನ ಇದ್ದಾರೆಂದು ಹೇಳಿದ್ದರು. ನಮಗೆ ಮಾರಾಟ ಮಾಡುವಾಗ ಮಧುರವರ ತಂದೆ ತಾಯಿ ಬದುಕಿದ್ದರು.

ಮಧುರವರ ಕುಟುಂಬದಲ್ಲಿ ಹಿಸ್ಸೆ ಆಗಿದೆಯೋ ಇಲ್ಲವೋ ಎಂಬ ಬಗ್ಗೆ ತಿಳಿದುಕೊಂಡಿಲ್ಲ. ಮಧುಸೂದನ ರವರ ಕುಟುಂಬದಲ್ಲಿ ಯಾವುದೇ ಹಿಸ್ಸೆ ಆಗಿಲ್ಲ ಎಂದರೆ, ಅವರ ಸ್ವಂತಕ್ಕೆ ಸೇರಿದ ಕಾರಣ ಆಸ್ತಿಯನ್ನು ಖರೀದಿಸಿರುತ್ತೇವೆ. ಕುಟುಂಬದಲ್ಲಿ ಮಧುರವರೇ ಹಿರಿಯ ಮಗ ಅಂದರೆ ಇರಬಹುದು. ನಾವು ಕ್ರಯಕ್ಕೆ ಪಡೆದ ಆಸ್ತಿ ಒಟ್ಟುಕುಟುಂಬದ ಅಸ್ತಿಯಾಗಿರುವ ಕಾರಣ, ಯಾವುದೇ ಹಿಸ್ಸೆಯಾಗದೇ ಉಳಿದಿದ್ದ ಕಾರಣ, ಬೇರೆಯವರಿಗೂ ಹಿಸ್ಸೆಯ ಹಕ್ಕು ಇದ್ದ ಕಾರಣ, ಮಧುರವರಿಗೆ ಮಾರಾಟ ಮಾಡುವ ಹಕ್ಕಿಲ್ಲ ಎಂದರೆ ಸರಿಯಲ್ಲ. ಮಧುರವರ ಸಹೋದರ ಸಹೋದರಿಯರು, ತಂದೆ-ತಾಯಿ ಸೇರಿ ಆಸ್ತಿಯನ್ನು ನಮಗೆ ಮಾರಾಟ ಮಾಡಿಲ್ಲ ಎಂದರೆ ಸಾಕ್ಷಿ, ಮಧುರವರ ಸ್ವಂತ ಆಸ್ತಿಯಾಗಿರುವ ಕಾರಣ, ಅವರು ನಮಗೆ ಮಾರಾಟ ಮಾಡಿರುತ್ತಾರೆ.

ಈ ಹಿಂದಿನ ದಾವೆಯನ್ನು ಏಕೆ ಹಿಂಪಡೆಯಲಾಯಿತು ಎಂದು ಕಾರಣ ತಿಳಿಸುವಿರಾ ಎಂದರೆ ಸಾಕ್ಷಿ, ಮತ್ತೊಂದು ಕೇಸು ದಾಖಲು ಮಾಡಬೇಕಾಗಿದ್ದ ಕಾರಣ ಹಿಂಪಡೆಯಲಾಗಿದೆ. ಈ ಹಿಂದೆ ದಾಖಲಿಸಿದ್ದ ದಾವೆಯಲ್ಲಿ ಹಾಜರುಪಡಿಸಿದ್ದ ಕರಾರು ಪತ್ರ ನೋಂದಣಿಯಾಗಿದ್ದ ಕರಾರು ಪತ್ರ ಎಂದರೆ ಸರಿಯಲ್ಲ ಈ ಹಿಂದೆ ದಾಖಲಿಸಿದ್ದ ದಾವೆಯಲ್ಲಿ ಹಾಜರುಪಡಿಸಿದ ಕರಾರಿನಲ್ಲಿ ಯಾರು ಯಾರು ಸಾಕ್ಷಿದಾರರಾಗಿದ್ದರು ಎಂದರೆ ಸಾಕ್ಷಿ, ಯೋಗಣ್ಣ, ಮತ್ತೊಬ್ಬರು ನವೀನ ಎಂಬುವವರು ಇರಬೇಕು ಎನ್ನುತ್ತಾರೆ. ಬೆಕ್ಕದ ನಾಗರಾಜಪ್ಪ ರವರು ಈ ಹಿಂದಿನ ಪತ್ರಕ್ಕೆ ಬಿಕ್ಲಂದಾರರಾಗಿರುತ್ತಾರೆ. ಹಿಂದಿನ ಕರಾರು ಪತ್ರ 5 ಲಕ್ಷಕ್ಕೆ ಆಗಿತ್ತು. 4,90,000 ಕೊಟ್ಟಿದ್ದೆವು, 10,000 ರಿಜಿಸ್ಟರ್ ಸಮಯದಲ್ಲಿ ಕೊಡಲು ನಿಗಧಿಯಾಗಿತ್ತು. ಹಿಂದಿನ ದಾವೆಯನ್ನು 2013 ರಲ್ಲಿ ಹಿಂಪಡೆಯಲಾಗಿರುತ್ತದೆ.

ಈ ಹಿಂದಿನ ಕರಾರನ್ನು ದಿಃ20-3-2015 ರಲ್ಲಿ ರದ್ದುಗೊಳಿಸಲಾಗಿರುತ್ತದೆ ಎಂದರೆ ಹೌದು, ಆದರೆ ರದ್ದುಗೊಳಿಸಿದ ನಂತರ ಮತ್ತೊಂದು ಕರಾರನ್ನು ಮಾಡಿಕೊಟ್ಟಿರುತ್ತಾರೆ. ಆ ಮತ್ತೊಂದು ಕರಾರು ನೋಂದಣಿಯಾಗಿರುವುದಿಲ್ಲ, ಹಾಗೆಯೇ ಉಳಿದಿರುತ್ತದೆ.

ಕರಾರನ್ನು ರದ್ದುಗೊಳಿಸಿದ ಸಂದರ್ಭದಲ್ಲಿ ನಮ್ಮಿಂದ ಪಡೆದುಕೊಂಡಿದ್ದ ಹಣಕ್ಕೆ ಸರ್ವೆ ನಂಃ 111/3 ರಲ್ಲಿ 1 ಎಕರೆ 2 ವರೆ ಗುಂಟೆ ಜಮೀನನ್ನು ನಮ್ಮ ಹೆಸರಿಗೆ ನೋಂದಣಿ ಮಾಡಿಕೊಟ್ಟಿರುತ್ತಾರೆ, ಆದ ಕಾರಣ ಹಳೆಯ ಕರಾರು ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ಇದನ್ನು ನಾವು ಪ್ರತ್ಯೇಕವಾಗಿ ಖರೀದಿಸಿರುತ್ತೇವೆ. ಹಳೆಯ ಕರಾರನ್ನು ರದ್ದುಗೊಳಿಸುವ ಉದ್ದೇಶದಿಂದಲೇ ಸರ್ವೆ ನಂಃ111/3 ರಲ್ಲಿ 1 ಎಕರೆ 2 ವರೆ ಗುಂಟೆ ಜಮೀನನ್ನು ನಮ್ಮ ಹೆಸರಿಗೆ ನೋಂದಾಯಿತ ಕ್ರಯಪತ್ರದಲ್ಲಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಆಸ್ತಿ ನೋಂದಣಿ ಮಾಡಿಕೊಟ್ಟಿದ್ದರೂ ಆಸ್ತಿಯ ಖಾತೆ ಮಾಡುವವರೆಗೂ ಭದ್ರತೆಗಾಗಿ ಇರಲಿ ಎಂದು ಖಾಲಿ ಛಾಪಾ ಕಾಗದಕ್ಕೆ ಮಧುರವರ ಸಹಿಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ಖಾತೆ ತನಗೆ ತಾನೇ ಬದಲಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನೀವು ಈ ದಾವೆಯಲ್ಲಿ ಸಲ್ಲಿಸಿರುವ ಕರಾರನ್ನು

ಯಾವಾಗ ಬರೆಸಿಕೊಂಡಿರಿ ಎಂದರೆ ಸಾಕ್ಷಿ 20-3-2015 ರಲ್ಲಿ ಎಂದು ನುಡಿಯುತ್ತಾರೆ. ಈ ಕರಾರಿಗೂ ಯೋಗಣ್ಣ ಮತ್ತು ನವೀನರವರು ಸಹಿ ಮಾಡಿರುತ್ತಾರೆ. ಬೆಕ್ಕದ ನಾಗರಾಜುರವರೇ ಬಿಕ್ಲಂ ಮಾಡಿರುತ್ತಾರೆ. ಈ ದಾವೆಯಲ್ಲಿ ವಕೀಲರ ಮುಖಾಂತರ ಯಾವಾಗ ನೋಟೀಸು ಮಾಡಿಸಿದ್ದಿರಿ ಎಂದರೆ ಗೊತ್ತಿಲ್ಲ. ಅದು ಯಾವಾಗ ಜಾರಿಯಾಗಿರುತ್ತದೆ ಎಂದರೆ ನನಗೆ ನೆನಪಿಲ್ಲ. ಈ ದಾವೆಯಲ್ಲಿನ ಕರಾರಿನ ಬಗ್ಗೆ ಕಳುಹಿಸಿದ ನೋಟೀಸು ಪ್ರತಿವಾದಿ ಮಧುರವರಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-3 ದಾಖಲೆ ತೋರಿಸಿ ಅದರಲ್ಲಿರುವ ಸಹಿ ಯಾರದು ಎಂದು ಕೇಳಲಾಗಿ, ಸಾಕ್ಷಿಯು ಮಧುರವರ ಸಹಿಯೇ ಆಗಿರುತ್ತದೆ ಎನ್ನುತ್ತಾರೆ. ಸಾಕ್ಷಿಗೆ ನಿಪಿ-1 ದಾಖಲೆಯನ್ನು ತೋರಿಸಿ ಕೇಳಲಾಗಿ, ಅದರಲ್ಲಿರುವ ಸಹಿ ಮಧುರವರದೇ ಇರಬಹುದು ನೆನಪಿಲ್ಲ ಎನ್ನುತ್ತಾರೆ. ನಿಪಿ-1 ರ ಛಾಪಾ ಕಾಗದವನ್ನು ಮಧುರವರೇ ತಂದಿರುತ್ತಾರೆ. ಮಧುರವರು ತಂದಿರುವುದಿಲ್ಲ ಎಂದರೆ ಸರಿಯಲ್ಲ. ರದ್ದಾಗಿರುವ ಆಸ್ತಿಗೆ ಸಂಬಂಧಿಸಿದದಿಂತೆ ನಿಪಿ-1 ನ್ನು ಬರೆಯಲಾಗಿದೆ ಎಂದರೆ ಸಾಕ್ಷಿ, ಅವತ್ತೇ ಮತ್ತೊಂದು ದಾಖಲೆಯನ್ನು ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಚನ್ನರಾಯಪಟ್ಟಣದ ಮಧ್ಯಭಾಗದಲ್ಲಿರುವ ಕಾರಣ, ಅತ್ಯಂತ ಬೆಲೆಬಾಳುವ ಆಸ್ತಿಯಾದ ಕಾರಣ, ಅದನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-1 ದಾಖಲೆಯನ್ನು ಈ ದಾವೆಯಲ್ಲಿ ಸೃಷ್ಟಿ ಮಾಡಿ ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ನಿಜವಾಗಿಯೂ ಕರಾರು ಆಗಿದ್ದಲ್ಲಿ, ಈ ಹಿಂದಿನಂತೆ ನೋಂದಾಯಿತ ಕರಾರನ್ನೇ ನಾವು ಮಧುರವರಿಂದ ಮಾಡಿಸಿಕೊಳ್ಳುತ್ತಿದ್ದೆವು, ಆದರೆ ನಿಪಿ-12 ಸೃಷ್ಟಿ ಮಾಡಿಕೊಂಡಿರುವ ದಾಖಲೆಯಾದ್ದರಿಂದ ನೋಂದಾಯಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದಿನ ನೋಂದಾಯಿತ ಕ್ರಯದ ಕರಾರಿನ ರದ್ದತಿಯ ಪತ್ರದ ಸಮಯಕ್ಕೂ ಈ ದಾವೆಯ ನಿಪಿ-1 ದಾಖಲೆಯ ಕಾಗದ ಖರೀದಿಸಿದ ಸಮಯಕ್ಕೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

( ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಚನ್ನರಾಯಪಟ್ಟಣ